**<u>ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್</u>**
**<u>ಸಿ. ಸಿ. ನಂ. 34/2024</u>**

ಸಿಡಬ್ಲ್ಯೂ-05
ಪಿಡಬ್ಲ್ಯೂ-03

| | |
|---|---|
| ಸಾಕ್ಷಿದಾರರ ಹೆಸರು | ಬಂಗಾರಪ್ಪ ಬಿಡೇದ |
| ತಂದೆ ಹೆಸರು | ಮಹಾಕಾಳಪ್ಪ |
| ವಯಸ್ಸು | 52 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ ಸ್ಥಳ | ಅರಳೇಶ್ವರ |

**ದಿನಾಂಕ : 15-01-2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

1. ಚಾಸಾ-4 ಮತ್ತು 6 ರವರ ಪರಿಚಯ ಇರುತ್ತದೆ. ಘಟನೆಯಲ್ಲಿ ವಿದ್ಯುತ್ ತಂತಿ ಹರಿದು ಬಿದ್ದು ಪ್ರಭು ಚನ್ನಪ್ಪ ಹಂಚಿನ ಮನಿ ಎಂಬುವವರಿಗೆ ತಗುಲಿ ಮೃತಪಟ್ಟ ಬಗ್ಗೆ ಆದ ಪಂಚನಾಮೆಯಲ್ಲಿ ನಾನು ಪಾಲ್ಗೊಂಡಿದ್ದೆ. ಸಾಕ್ಷಿಯು ಘಟನಾ ಸ್ಥಳದ ಪಂಚನಾಮೆಯನ್ನು ನೋಡುತ್ತಿದ್ದು, ಅದರಲ್ಲಿ ತನ್ನ ಸಹಿ ಇದೆ ಎಂದು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಗುರುತಿಸಿದ ಸದರಿ ಪಂಚನಾಮೆಯನ್ನು ಈಗಾಗೇ ನಿ.ಪಿ-3 ಎಂದು ಗುರುತಿಸಿದ್ದು, ಅದರಲ್ಲಿ ಸಾಕ್ಷಿ ಗುರುತಿಸಿದ ಸಹಿಯನ್ನು ನಿ.ಪಿ-3(ಬಿ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯನ್ನು ಪೊಲೀಸರು ದಿಃ 13-10-2022 ರಂದು ಮಧ್ಯಾಹ್ನ 1.00 ಗಂಟೆ ಸುಮಾರಿಗೆ ನನ್ನ ಮತ್ತು ಚಾಸಾ-4 ರವರ ಸಮಕ್ಷಮ ಚಾಸಾ-6 ರವರು ತೋರಿಸಿದ ಘಟನಾ ಸ್ಥಳದಲ್ಲಿ ಬರೆದಿರುತ್ತಾರೆ. ಪಂಚನಾಮೆಯಲ್ಲಿ ಇರುವ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಪಂಚನಾಮೆಯನ್ನು ಜರುಗಿಸುವ ಸಮಯಕ್ಕೆ ಪೊಲೀಸರು ಛಾಯಾ ಚಿತ್ರಗಳನ್ನು ತೆಗೆದಿರುತ್ತಾರೆ. ಸಾಕ್ಷಿಯು ಘಟನಾ ಸ್ಥಳದಲ್ಲಿ ಪಂಚನಾಮೆ ಸಮಯಕ್ಕೆ ತೆಗೆದಿರುತ್ತಾರೆ ಎಂದು ಹೇಳುವ ಛಾಯಾ ಚಿತ್ರಗಳನ್ನು ನೋಡಿ ಗುರುತಿಸಿದ್ದು, ಅವುಗಳ ಪೈಕಿ ಒಂದು ಛಾಯಾ ಚಿತ್ರವನ್ನು ಈಗಾಗಲೇ ನಿ.ಪಿ-4

ಎಂದು ಗುರುತಿಸಿದ್ದು, ಉಳಿದ 4-ಛಾಯಾ ಚಿತ್ರಗಳನ್ನು ನಿ.ಪಿ-5 ರಿಂದ 8 ಎಂದು ಗುರುತಿಸಲಾಯಿತು. ಸದರಿ ಛಾಯಾ ಚಿತ್ರಗಳನ್ನು ವಿದ್ಯುತ್ ತಂತಿಯು ಕಿತ್ತು ಜಮೀನಿನಲ್ಲಿ ಬಿದ್ದ ಬಗ್ಗೆ ತೆಗೆಯಲಾಗಿತ್ತು.

**(ಈ ಹಂತದಲ್ಲಿ ಮಾನ್ಯ ಎಪಿಪಿ ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದರು. ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ</u>**

ನಿ.ಪಿ-3 ರ ಪಂಚನಾಮೆಯನ್ನು ಪೊಲೀಸರು ಬೆಳಗ್ಗೆ 11.00 ರಿಂದ ಮಧ್ಯಾಹ್ನ 12.00 ರ ಅವಧಿಯಲ್ಲಿ ಬರೆದಿರುತ್ತಾರೆ ಎಂದರೆ ಸರಿ.

**<u>ಪಾಟೀ ಸವಾಲು: ಆರೋಪಿಗಳ ಪರ ಶ್ರೀ ಎಸ್.ಆರ್.ಪಿ ವಕೀಲರಿಂದ:</u>**

ನಾನು ಗ್ರಾಮದ ಶಿಬಾರದ ಹತ್ತಿರ ಇದ್ದಾಗ ಪೊಲೀಸರು ಪಂಚನಾಮೆಯ ಉದ್ದೇಶಕ್ಕೆ ಕರೆದುಕೊಂಡು ಹೋಗಿರುತ್ತಾರೆ. ವಿದ್ಯುತ್ ಅವಘಡದಿಂದ ವ್ಯಕ್ತಿಯು ಮರಣ ಹೊಂದಿದ ಬಗ್ಗೆ ಪಂಚನಾಮೆ ಬರೆಯಬೇಕು ಎಂದು ಪೊಲೀಸರು ನನಗೆ ತಿಳಿಸಿದ್ದರು. ಘಟನಾ ಸ್ಥಳವನ್ನು ಚಾಸಾ-6 ರವರು ತೋರಿಸಿರುತ್ತಾರೆ. ಪಂಚನಾಮೆಯಲ್ಲಿ ಇರುವ ಸಂಗತಿಗಳನ್ನು ಪೊಲೀಸರು ಬರೆದು ಓದಿ ತಿಳಿಸಿದ್ದರು. ಪಂಚನಾಮೆಯಲ್ಲಿ ಇರುವ ಸಂಗತಿಗಳನ್ನು ಬರೆಯಲು ನಾನು ಮಾಹಿತಿ ನೀಡಿರುವುದಿಲ್ಲ. ಮೃತಪಟ್ಟ ವ್ಯಕ್ತಿಯ ತಂದೆಯ ಮಾತನ್ನು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ.

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ

ಹಾನಗಲ್ಲ.

ಸಾಕ್ಷಿದಾರರ ಸಹಿ

**ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್**
**ಸಿ. ಸಿ. ನಂ. 34/2024**

ಸಿಡಬ್ಲ್ಯು-4
ಪಿಡಬ್ಲ್ಯು-2

| | |
|---|---|
| ಸಾಕ್ಷಿದಾರರ ಹೆಸರು | ಬಸವರಾಜ ಹೀರೂರು |
| ತಂದೆ ಹೆಸರು | ಕಲ್ಲಪ್ಪ |
| ವಯಸ್ಸು | 32 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ ಸ್ಥಳ | ಅರಳೇಶ್ವರ |

ದಿನಾಂಕ : **15-01-2025** ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ **ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದಃ**

1. ಚಾಸಾ-5 ಮತ್ತು 6 ರವರ ಪರಿಚಯ ಇರುತ್ತದೆ. ಘಟನೆಯಲ್ಲಿ ವಿದ್ಯುತ್ ತಂತಿ ಹರಿದು ಬಿದ್ದು ಆದ ಅವಘಡಕ್ಕೆ ಸಂಭವಿಸಿದಂತೆ ನಾನು ಪಂಚನಾಮೆಯಲ್ಲಿ ಪಾಲ್ಗೊಂಡಿದ್ದೆ. ಸಾಕ್ಷಿಯು ಘಟನಾ ಸ್ಥಳದ ಪಂಚನಾಮೆಯನ್ನು ನೋಡುತ್ತಿದ್ದು, ಅದರಲ್ಲಿ ತನ್ನ ಸಹಿ ಇದೆ ಎಂದು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಗುರುತಿಸಿದ ಸದರಿ ಪಂಚನಾಮೆಯನ್ನು ನಿ.ಪಿ-3 ಎಂದು, ಅದರಲ್ಲಿ ಸಾಕ್ಷಿ ಗುರುತಿಸಿದ ಸಹಿಯನ್ನು ನಿ.ಪಿ-3(ಎ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯನ್ನು ಪೊಲೀಸರು ದಿಃ 13-10-2022 ರಂದು ಬೆಳಗ್ಗೆ 11.00 ರಿಂದ ಮಧ್ಯಾಹ್ನ 12.00 ರವರೆಗೆ ನನ್ನ ಮತ್ತು ಚಾಸಾ-5 ರವರ ಸಮಕ್ಷಮ ಚಾಸಾ-6 ರವರು ತೋರಿಸಿದ ಘಟನಾ ಸ್ಥಳದಲ್ಲಿ ಬರೆದಿರುತ್ತಾರೆ. ಪಂಚನಾಮೆಯಲ್ಲಿ ಇರುವ ಸಂಗತಿಗಳನ್ನು ಪೊಲಿಸರು ಓದಿ ತಿಳಿಸಿದ ನಂತರ ನಾನು ಸಹಿ ಮಾಡಿರುತ್ತೇನೆ. ಪಂಚನಾಮೆಯನ್ನು ಜರುಗಿಸುವ ಸಮಯಕ್ಕೆ ಪೊಲೀಸರು ಛಾಯಾ ಚಿತ್ರಗಳನ್ನು ತೆಗೆದಿರುತ್ತಾರೆ ಹಲವು ಛಾಯಾ ಚಿತ್ರಗಳ ಪೈಕಿ ಒಂದು

ಛಾಯಾ ಚಿತ್ರವನ್ನು ನೋಡಿ ಗುರುತಿಸಿ ಅದರಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರತಿಸಿರುತ್ತಾರೆ. ಸಾಕ್ಷಿ ನೋಡಿ ಗುರುತಿಸಿದ ಛಾಯಾ ಚಿತ್ರವನ್ನು ನಿ.ಪಿ-4 ಎಂದು ಗುರುತಿಸಲಾಯಿತು. ಸರಿ ಛಾಯಾ ಚಿತ್ರವನ್ನು ಪ್ರಭು ಹಂಚಿನಮನಿ ಎಂಬುವವರು ವಿದ್ಯುತ್ ಸಂಪರ್ಕ ತಗುಲಿ ಮರಣ ಹೊಂದಿದ್ದ ಸ್ಧಳದಲ್ಲಿ ಮತ್ತು ಅದರ ಬಗ್ಗೆ ತೆಗೆದಿದ್ದರು.

**ಪಾಟೀ ಸವಾಲು: ಆರೋಪಿಗಳ ಪರ ಶ್ರೀ ಎಸ್.ಆರ್.ಪಿ ವಕೀಲರಿಂದ:**

ನಾನು ನಮ್ಮ ಹೊಲದಲ್ಲಿ ಇದ್ದಾಗ ಪೊಲೀಸರು ಪಂಚನಾಮೆಯ ಉದ್ದೇಶಕ್ಕೆ ಕರೆದುಕೊಂಡು ಹೋಗಿರುತ್ತಾರೆ. ಪಂಚನಾಮೆಯಲ್ಲಿ ಇರುವ ಸಂಗತಿಗಳನ್ನು ಯಾರು ನೀಡಿರುತ್ತಾರೆ ಎಂದು ಗೊತ್ತಿಲ್ಲ. ಪಂಚನಾಮೆಯನ್ನು ಪೊಲೀಸರು ಬರೆದಿರುತ್ತಾರೆ. ಪಂಚನಾಮೆಯಲ್ಲಿ ಇರುವ ಸಂಗತಿಗಳನ್ನು ನಾನು ಮಾಹಿತಿ ನೀಡಿ ಬರೆಸಿರುವುದಿಲ್ಲ. ಘಟನಾ ಸ್ಥಳದ ಚಕ್ಕುಬಂದಿಗಳು ನನಗೆ ಗೊತ್ತಿರುವುದಿಲ್ಲ. ಮೃತಪಟ್ಟ ವ್ಯಕ್ತಿಯ ತಂದೆಯ ಮಾತನ್ನು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ

**ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್**
**ಸಿ. ಸಿ. ನಂ. 34/2024**

ಸಿಡಬ್ಲ್ಯು-1
ಪಿಡಬ್ಲ್ಯು-2

| | |
|---|---|
| ಸಾಕ್ಷಿದಾರರ ಹೆಸರು | ಗಿರೀಶ ಹಂಚಿನಮನಿ |
| ತಂದೆ ಹೆಸರು | ಚನ್ನಪ್ಪ |
| ವಯಸ್ಸು | 42 ವರ್ಷ |
| ಉದ್ಯೋಗ | ಕೆ ಎಸ್ ಆರ್ ಟಿ ಸಿ ಸಂಸ್ಥೆಯ ಉದ್ಯೋಗಿ |
| ವಾಸ ಸ್ಥಳ | ರಾಣೆಬೆನ್ನೂರು. |

**ದಿನಾಂಕ : 15-01-2025** ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ **ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದಃ**

1. ಮೃತ ಪ್ರಭುಲಿಂಗ ನನ್ನ ಅಣ್ಣ. ಅರಳೇಶ್ವರ ಗ್ರಾಮದ ಗುರುಲಿಂಗಪ್ಪ ಚಿಕ್ಕೇರಿ ರವರ ಜಮೀನಿನ ಹತ್ತಿರ ಇರುವ ವಿದ್ಯುತ್ ಟಿ ಸಿ ಯ ತಂತಿಯು ಆಗಾಗ್ಗೆ ಹರಿದು ಅಥವಾ ಕಿತ್ತು ಬೀಳುತ್ತಿದ್ದು, ಅದನ್ನು ಸರಿಯಾಗಿ ದುರಸ್ತಿ ಪಡಿಸುವಂತೆ 2 ನೇ ಆರೋಪಿಗೆ ನಾನು ಮತ್ತು ನನ್ನ ಅಣ್ಣ ತಿಳಿಸಿದ್ದೆವು. ಸದರಿ ಮೌಖಿಕ ಕೋರಿಕೆಗೆ ಅವರು ದುರಸ್ತಿಪಡಿಸುವುದಾಗಿ ಹೇಳುತ್ತಾ ಬಂದಿದ್ದನ್ನು ಹೊರತುಪಡಿಸಿ, ದುರಸ್ತಿಪಡಿಸಿರುವುದಿಲ್ಲ.

2. ಹೀಗಿರುವಾಗ ದಿಃ 11-10-2022 ರಂದು ಸುಮಾರು ಮಧ್ಯಾಹ್ನ 12.00 ಅವಧಿಯಲ್ಲಿ ಜಮೀನಿನಲ್ಲಿ ಕೆಲಸ ಮಾಡಲು ಅಣ್ಣ ಪ್ರಭುಲಿಂಗ ಹಂಚಿನ ಮನಿ ಹೋಗಿದ್ದರು. ಆಗ ಜಮೀನಿಗೆ ಹೋಗುತ್ತಿದ್ದಾಗ ಸದರಿ ಟಿಸಿಯ ವಿದ್ಯುತ್ ತಂತಿಯು ಹರಿದು ಬಿದ್ದಿತ್ತು. ಆ ದಿನ ನನ್ನ ಅಣ್ಣ ಸಂಜೆ 7.00 ಗಂಟೆಯಾದರೂ ಮನೆಗೆ ವಾಪಾಸು ಬರದೇ ಇದ್ದ ಕಾರಣಕ್ಕೆ ಅವರನ್ನು ನೋಡಲು ನನ್ನ ತಂದೆಯು ಜಮೀನಿನ ಬಳಿ

ಹೋಗಿದ್ದರು. ಹಾಗೆ ಹೋಗಿ ನೋಡಿದಾಗ ನನ್ನ ಅಣ್ಣ ಪ್ರಭುಲಿಂಗ ಹಂಚಿನಮನಿ ರವರು ಹರಿದು ಬಿದ್ದ ವಿದ್ಯುತ್ ತಂತಿಯು ತಗುಲಿ ಅಲ್ಲಿಯೇ ಮೃತಪಟ್ಟಿದ್ದು ಕಂಡು ಬಂದಿರುತ್ತದೆ. ನಮ್ಮ ಕುಟುಂಬದ ಜಮೀನು ಗುರುಲಿಂಗಪ್ಪ ಹಂಚಿನ ಮನಿ ರವರ ಜಮೀನಿನ ಹತ್ತಿರ ಬರುತ್ತದೆ. ಸದರಿ ಘಟನೆಯ ಬಗ್ಗೆ ನನ್ನ ತಂದೆ ಗ್ರಾಮದ ಜನರಿಗೆ ತಿಳಿಸಿರುತ್ತಾರೆ ಮತ್ತು ಪಿರ್ಯಾದನ್ನು ದಾಖಲಿಸಬೇಕೆಂದು ವಿಚಾರಿಸಿರುತ್ತೇವೆ. ವಿದ್ಯುತ್ ಸ್ಪರ್ಶದಿಂದ ಅಲ್ಲಿಯೇ ಬಿದ್ದಿದ್ದ ನನ್ನ ಅಣ್ಣನನ್ನು ಆಡೂರು ಪೊಲೀಸ್ ಠಾಣೆಯ ಪಿ ಎಸ್ ಐ ರವರು ಘಟನಾ ಸ್ಥಳಕ್ಕೆ ಬಂದು ವಾಹನದ ಮೂಲಕ ಹಾನಗಲ್ಲನ ಸರಕಾರಿ ಆಸ್ಪತ್ರೆಗೆ ದಾಖಲಿಸಿರುತ್ತಾರೆ. ನನ್ನ ಅಣ್ಣ ಘಟನಾ ಸ್ಥಳದಲ್ಲಿಯೇ ಮೃತಪಟ್ಟಿದ್ದರು.

3. ಘಟನಾ ದಿನದ ಮಾರನೆ ದಿನವಾದ ದಿ 12-10-2022 ರಂದು ಬೆಳಗ್ಗೆ 10.00 ಗಂಟೆ ಸುಮಾರಿಗೆ ನಾನು ಆಡೂರು ಪೊಲೀಸ್ ಠಾಣೆಯಲ್ಲಿ ದಾಖಲಿಸಿರುತ್ತೇನೆ. ನನ್ನ ಅಣ್ಣನ ಮರಣಕ್ಕೆ ಆರೋಪಿಗಳು ಸರಿಯಾಗಿ ವಿದ್ಯುತ್ ತಂತಿಗಳನ್ನು ದುರಸ್ತಿಪಡಿಸದ ಕಾರಣ ಮತ್ತು ನಿರ್ಲಕ್ಷತೆಯೇ ಕಾರಣವಾಗಿರುತ್ತದೆ. ಸಾಕ್ಷಿಯು ತಾನು ನೀಡಿದ್ದೇನೆ ಎಂದು ಹೇಳುವ ಪಿರ್ಯಾದನ್ನು ನೋಡುತ್ತಿದ್ದು, ಅದರಲ್ಲಿ ತಮ್ಮ ಸಹಿ ಇದೆ ಎಂದು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಗುರುತಿಸಿದ ಪಿರ್ಯಾದನ್ನು ನಿ.ಪಿ-2 ಎಂದು, ಅದರಲ್ಲಿ ಸಾಕ್ಷಿ ಗುರುತಿಸಿದ ಸಹಿಯನ್ನು ನಿ.ಪಿ-2(ಎ) ಎಂದು ಗುರುತಿಸಲಾಯಿತು. ಸದರಿ ವಿದ್ಯುತ್ ಅವಘಡವು ಮಧ್ಯಾಹ್ನ 12.00 ರಿಂದ ಸಂಜೆ 6.00 ಗಂಟೆ ಅವಧಿ ಒಳಗೆ ಸಂಭವಿಸಬಹುದು. ಸಾಕ್ಷಿಯು ನ್ಯಾಯಾಲಯದಲ್ಲಿ ಇರುವ ಆರೋಪಿಗಳನ್ನು ನೋಡಿ ಗುರುತಿಸಿರತ್ತಾರೆ.

<u>**ಪಾಟೀ ಸವಾಲು: ಆರೋಪಿಗಳ ಪರ ಶ್ರೀ ಎಸ್.ಆರ್.ಪಿ ವಕೀಲರಿಂದ:**</u>

1. ಘಟನೆಯ ಬಗ್ಗೆ ನನ್ನ ತಂದೆ ಮಾಹಿತಿ ನೀಡಿದ್ದರು. ನಾನು ಘಟನೆಯ ದಿನ ಮನೆಗೆ ರಾತ್ರಿ 8.00 ಗಂಟೆಗೆ ಬಂದಿರುತ್ತೇನೆ. ನಾನು ಘಟನಾ ಸ್ಥಳಕ್ಕೆ ಹೋಗಿಲ್ಲ ಎಂದರೆ

ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ರಾತ್ರಿ 9.00 ಗಂಟೆಗೆ ಹೋಗಿದ್ದೆ.ಗುರುಲಿಂಗಪ್ಪ ರವರ ಜಮೀನಿನ ಬಳಿ ನಮ್ಮ ಜಮೀನಿಗೆ ಹೋಗುವ ವಿದ್ಯುತ್ ಅವಘಡವಾದ ರಸ್ತೆ ಹೊರತುಪಡಿಸಿ ಮತ್ತೊಂದು ರಸ್ತೆ ಇದೆ ಎಂದರೆ ಸರಿ. ನಮ್ಮ ಕುಟುಂಬಕ್ಕೆ ಸೇರಿದ ಜಮೀನುಗಳ ಸರ್ವೇ ನಂಬರುಗಳು 52/1, 52/2 ಮತ್ತು 52/3. ಸದರಿ ಜಮೀನುಗಳಿಗೆ ಕೊಳವೇ ಬಾವಿಯ ಉಪಯೋಗ ಇದೆ. ನಮ್ಮ ಜಮೀನಿನಲ್ಲಿ ತೆಗೆಸಿರುವ ಕೊಳವೆ ಬಾವಿಗೆ ವಿದ್ಯುತ್ ಸಂಪರ್ಕವನ್ನು ಗುರುಲಿಂಗಪ್ಪ ಹಂಚಿನ ಮನಿ ರವರ ಬಳಿ ಇರುವ ಟಿಸಿಯಿಂದ ವಿದ್ಯುತ್ ಸಂಪರ್ಕವನ್ನು ಪಡೆದಿರುತ್ತೇವೆ. ಸದರಿ ವಿದ್ಯುತ್ ಟಿ ಸಿ ಯಿಂದ ಎಷ್ಟು ಉಪ ವಿದ್ಯುತ್ ಲೈನ್ ಗಳು ಅಥವಾ ಸಂಪರ್ಕಗಳು ಇರುತ್ತವೆಂದು ನನಗೆ ನಿಖರವಾಗಿ ಗೊತ್ತಿಲ್ಲ.  ಸಾಕ್ಷಿ ಮಂದುವರೆದು ನನಗೆ ಗೊತ್ತಿರುವ ಪ್ರಕಾರ 3 ಉಪ ವಿದ್ಯುತ್ ಸಂಪರ್ಕ ಇದೆ ಎಂದು ನುಡಿಯುತ್ತಾರೆ. ಸದರಿ 3 ಉಪ ವಿದ್ಯುತ್ ಸಂಪರ್ಕಗಳಲ್ಲಿ ಒಂದು ಗುರುಲಿಂಗಪ್ಪ ಚಿಕ್ಕೇರಿರವರ, ಮತ್ತೊಂದು ನಮ್ಮ ಜಮೀನಿಗೆ ಹಾಗೂ ಮೂರನೆಯದು ಚಂದ್ರಪ್ಪ ಗೂಳಿ ರವರ ಜಮೀನಿಗೆ ಹೋಗಿರುತ್ತವೆ.

2. ಗುರುಲಿಂಗಪ್ಪ ಚಿಕ್ಕೇರಿ ರವರ ಜಮೀನಿನ ಬಳಿ ಇರುವ ವಿದ್ಯುತ್ ಟಿ ಸಿ ಯು ಸುಮಾರು 15 ವರ್ಷಗಳ ಹಳೆಯದು. ಸದರಿ  ಟಿ.ಸಿ ಯಿಂದ ನಮ್ಮ ಜಮೀನಿಗೆ ವಿದ್ಯುತ್ ಸಂಪರ್ಕವನ್ನು 2016 ರಲ್ಲಿ ಪಡೆದಿದ್ದೆವು. ನಮ್ಮ ಜಮೀನಿಗೆ ವಿದ್ಯುತ್ ತಂತಿಯ ಸಂಪರ್ಕವನ್ನು ಹೊಸದಾದ ವಿದ್ಯುತ್ ಸಾಮಗ್ರಿಗಳನ್ನು ಉಪಯೋಗಿಸಿ ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ. ನಮ್ಮ ಜಮೀನಿಗೆ ಹೊಸದಾದ ವಿದ್ಯುತ್ ತಂತಿಗಳನ್ನು ಉಪಯೋಗಿಸಿ ಸಂಪರ್ಕವನ್ನು ನೀಡಿದ್ದರು ಎಂದರೆ ಸರಿಯಲ್ಲ. ವಿದ್ಯುತ್ ಇಲಾಖೆಯವರು ನೀಡಿರುವ ಎಸ್ಟಿಮೇಷನ್ ಪ್ರಕಾರ ಸದರಿ ವಿದ್ಯುತ್ ಸಂಪರ್ಕ ಹೊಸ ಮತ್ತು ಉತ್ತಮ ಸಾಮಗ್ರಿಗಳನ್ನು ಉಪಯೋಗಿಸಿ ಮಾಡಿದ ಸಂಪರ್ಕ ಎಂದರೆ ಸರಿಯಲ್ಲ. ಸಾಕ್ಷಿ ಮುಂದವರೆದು ನನ್ನ ಅಣ್ಣನ ಮರಣದ ಒಂದು ವರ್ಷದ ನಂತರ ಸದರಿ ಟಿ ಸಿ ಯಿಂದ ಹೋದ ವಿದ್ಯುತ್ ಸಂಪರ್ಕಗಳನ್ನು ಹೊಸದಾಗಿ ಮರು ಜೋಡಣೆ ಮಾಡಿದ್ದರು ಎಂದು ನುಡಿಯುತ್ತಾರೆ.

3. ನಮ್ಮ ಜಮೀನಿನಲ್ಲಿ ಇರುವ ವಿದ್ಯುತ್ ಸಂಪರ್ಕವನ್ನು ಸರಕಾರದ ಅಕ್ರಮ ಮತ್ತು ಸಕ್ರಮ ಯೋಜನೆ ಅಡಿಯಲ್ಲಿ ಪಡೆಯಲಾಗಿದೆ ಎಂದರೆ ಸರಿಯಲ್ಲ. ಅಕ್ರಮ ಮತ್ತು ಸಕ್ರಮ ಯೋಜನೆ ಅಡಿಯಲ್ಲಿ ಕಲ್ಪಿಸಲಾದ ವಿದ್ಯುತ್ ಸಂಪರ್ಕಗಳನ್ನು ಉತ್ತಮ ಗುಣಮಟ್ಟ ಮತ್ತು ಹೊಸದಾದ ವಿದ್ಯುತ್ ಸಾಮಗ್ರಿಗಳನ್ನು ಉಪಯೋಗಿಸಿ ಕಲ್ಪಿಸಲಾಗಿತ್ತು ಎಂದರೆ ಸರಿಯಲ್ಲ. ಅಕ್ರಮ ಮತ್ತು ಸಕ್ರಮ ಯೋಜನೆಯು ಜಾರಿ ಆಗುವ ಪೂರ್ವದಲ್ಲಿ ನಮ್ಮ ಸದರಿ ಜಮೀನುಗಳಲ್ಲಿ ಕೊಳವೆ ಬಾವಿ ಉಪಯೋಗ ಇತ್ತು ಎಂದರೆ ಸರಿ. ಸದರಿ ಯೋಜನೆಯು ಜಾರಿ ಆಗುವ ಪೂರ್ವದಲ್ಲಿ ಕೊಳವೆ ಉಪಯೋಗಿಸಲು ನಾನು ಮತ್ತು ನನ್ನ ಕುಟುಂಬದವರು ಅಕ್ರಮವಾಗಿ ವಿದ್ಯುತ್ ಸಂಪರ್ಕವನ್ನು ಉಪಯೋಗಿಸಿ ಕೊಳವೆ ಬಾವಿಉಪಯೋಗಿಸುತ್ತಿದ್ದೆವು ಎಂದರೆ ಸರಿಯಲ್ಲ.

4. ಗುರುಲಿಂಗಪ್ಪ ಚಿಕ್ಕೇರಿ ರವರ ಜಮೀನಿನ ಟಿ.ಸಿಯನ್ನು ಮತ್ತೊಂದು ಕಡೆಗೆ ಸ್ಥಳಾಂತರಿಸುವಂತೆ ಮೌಖಿಕವಾಗಿ ಮನವಿ ಸಂಬಂದಪಟ್ಟ ಇಲಾಖೆಗೆ ನೀಡಿದ್ದೆವು. ಅದಕ್ಕೆ ಸಂಬಂಧಪಟ್ಟಂತೆ ನಿಗದಿತ ಶುಲ್ಕವನ್ನು ಸಹ ಭರಿಸಿದ್ದೆವು. ಸದರಿ ಶುಲ್ಕ ಭರಿಸಿದ ರಸೀದಿಯನ್ನು ತನಿಖಾಧಿಕಾರಿಗೆ ನೀಡಿರುವುದಿಲ್ಲ. ಘಟನೆಯ ದಿನ ನನ್ನ ಅಣ್ಣ ಗುರುಲಿಂಗಪ್ಪ ರವರ ಜಮೀನಿನ ಬಳಿ ಇದ್ದ ಟಿ ಸಿ ಸಂಪರ್ಕದಲ್ಲಿ ಯಾವುದಾದರೂ ವಿದ್ಯುತ್ ತಂತಿಗಳು ಹರಿದಿರುತ್ತವೆಯೋ ಎಂದು ನೋಡಲು ಹೋಗಿದ್ದರು. ನನ್ನ ಅಣ್ಣ ಹರಿದು ಬಿದ್ದಿದ್ದ ವಿದ್ಯುತ್ ತಂತಿಯನ್ನು ತುಳಿದು ಮೃತಪಟ್ಟಿರುತ್ತಾರೆ. ಶವ ಪಂಚನಾಮೆಯೊಂದಿಗೆ ತನಿಖಾಧಿಕಾರಿಯು ಸಲ್ಲಿಸಿರುವ ಛಾಯಾಚಿತ್ರಗಳನ್ನು ನೋಡಿದಾಗ ಬಲಗಾಲಿನ ಮೇಲ್ಭಾದಲ್ಲಿ ತಂತಿಯು ಸುಟ್ಟ ಗಾಯವಾಗಿದ್ದು, ವಿದ್ಯುತ್ ತಂತಿಯನ್ನು ತುಳಿದು ಮರಣ ಹೊಂದಿರುತ್ತಾರೆ ಎಂದು ಕಂಡು ಬರುವುದಿಲ್ಲ ಎಂದರೆ ಸಾಕ್ಷಿಯು ಅವರು ಹೋದಾಗ ವಿದ್ಯುತ್ ತಂತಿಯು ಮೊದಲೇ ಹರಿದು ಬಿದ್ದಿದ್ದು, ಅದರ ಕೆಳಭಾಗದಿಂದ ಕಾಲನ್ನು ಹೋಗಲು ಎತ್ತಿದ ಸಂದರ್ಭದಲ್ಲಿ ಸಂಪರ್ಕಗೊಂಡು ಮರಣ ಹೊಂದಿರುತ್ತಾರೆ ಎಂದು ನುಡಿಯುತ್ತಾರೆ. ಕಾಲನ್ನು ಮೇಲಕ್ಕೆ ಎತ್ತಿದಾಗ

ಸಂಪರ್ಕಗೊಂಡು ಮರಣ ಹೊಂದಿರುತ್ತಾರೆ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.



5. ಘಟನಾ ದಿನದಂದು ನನ್ನ ಮೃತ ಅಣ್ಣ ನಮ್ಮ ಜಮೀನಿನಲ್ಲಿದ್ದ ಕೊಳವೆ ಬಾವಿಗೆ ಅನದಿಕೃತವಾಗಿ ಗುರುಲಿಂಗಪ್ಪ ರವರ ಜಮೀನಿನಲ್ಲಿದ್ದ ದ ವಿದ್ಯುತ್ ಟಿಸಿಗೆ ಕಡ್ಡಿ ಮತ್ತು ವಿದ್ಯುತ್ ತಂತಿ ಮೂಲಕ ಕೊಕ್ಕೆಯನ್ನು ಹಾಕಿ ವಿದ್ಯುತ್ ಸಂಪರ್ಕವನ್ನು ಪಡೆಯಲು ವಿದ್ಯುತ್ ತಂತಿಯ ಮೇಲೆ ಕಪ್ಪು ಬಣ್ಣದ ಅಥವಾ ತುಕ್ಕು ಹಿಡಿದಂತಹ ಕಾರ್ಬನ್ ಎನ್ನುವ ವಸ್ತುವನ್ನು ಅಳಿಸಲು ಅಥವಾ ಉಜ್ಜಲು ಪ್ರಯತ್ನಿಸಿ, ತಂತಿಯನ್ನು ಎಳೆದಾಗ ವಿದ್ಯುತ್ ತಂತಿಯು ಹರಿದು ಬಿದ್ದು ಅವಘಡ ಸಂಭವಿಸಿರುತ್ತದೆ ಎಂದರೆ ಸರಿಯಲ್ಲ. ಘಟನೆಯಲ್ಲಿ ವಿದ್ಯುತ್ ಅವಘಡವು ಮತ್ತು ನನ್ನ ಅಣ್ಣನ ಮರಣವು ಆರೋಪಿಗಳ ನಿರ್ಲಕ್ಷತೆಯಿಂದ ಸಂಭವಿಸಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇಂದು ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಸಂಗತಿಗಳೆಲ್ಲವೂ ಮತ್ತು ಪಿರ್ಯಾದಿನಲ್ಲಿ ನಮೂದಿಸಿರುವ ಸಂಗತಿಗಳೆಲ್ಲವೂ ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ